ಬ್ರಹ್ಮಣಿ. ಪಿ. ರಾವ್



# ಜೀವಜಲ

ಒಂದೂರಿನಲ್ಲಿ ಒಬ್ಬ ರಾಜನಿದ್ದ. ಅವನಿಗೆ ಮೂರು ಮಂದಿ ಗಂಡು ಮಕ್ಕಳಿದ್ದರು. ಒಂದು ಸಲ ರಾಜನಿಗೆ ತುಂಬಾ ಕಾಯಿಲೆಯಾಗಿ ಮಲಗಿಬಿಟ್ಟ. ಅರಮನೆಯ ಪಂಡಿತರು ಮಹಾರಾಜ ಬದುಕುವುದು ಅನುಮಾನವೆಂದರು. ರಾಜಕುಮಾರರು ಚಿಂತಾಕ್ರಾಂತರಾಗಿ ತಲೆ ತಗ್ಗಿಸಿ ಉದ್ಯಾನವನದಲ್ಲಿ ಶಥಪಥ ತಿರುಗುತ್ತಿದ್ದರು. ಅಲ್ಲಿಗೊಬ್ಬ ಮುದಿಮನುಷ್ಯ ಬಂದು ಅವರನ್ನು ನೋಡಿ, 'ಯಾಕೆ ಮಕ್ಕಳೇ ಇಷ್ಟು ದುಃಖದಿಂದ ಇದ್ದೀರಿ?' ಎಂದು ಕೇಳಿದ. 'ನಮ್ಮ ತಂದೆ ಮಹಾರಾಜರಿಗೆ ಅಂತ್ಯಕಾಲ ಸಮೀಪಿಸಿದೆ. ಯಾವುದರಿಂದಲೂ ಅವರನ್ನು ಉಳಿಸಿಕೊಳ್ಳಲು ಆಗುವುದಿಲ್ಲವಲ್ಲ ಎಂದು ಚಿಂತಿತರಾಗಿದ್ದೇವೆ' ಎಂದರು.

'ಯಾಕೆ? ಜೀವಜಲ ನಿಮ್ಮ ತಂದೆಯನ್ನು ಉಳಿಸುತ್ತದೆ. ಅದನ್ನು ತರಲು ನಿಮಗೆ